ಶ್ರೀ ಬಿ. ಜೆ. ಕೊಟ್ರಪ್ಪ.—ಇಲ್ಲಿ ಓಚ್ಲ್ಯಾನದ ಶಿಕ್ಷಕರು ಸಿ.ಬಿ.ಜೆಡ್. ಶಿಕ್ಷಕರಾಗಿದ್ದಾರೆ. ಅವರಿಗೆ ಗಣಿತ ವಿಷಯವನ್ನು ಬೋಧಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಗಣಿತ ಬೋಧನೆ ಮಾಡತಕ್ಕ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ತೀವ್ರಗತಿಯ ಪ್ರಯತ್ನ ಮಾಡಂತ್ತೀರಾ ?

ಶ್ರೀ ಎಂ. ರಘುಪತಿ.—ಗಣಿತ ಭೋಧನೆ ಮಾಡುವ ಉಪಾಧ್ಯಾಯರ ಕೊರತೆ ಇದೆಯೆಂದು ಮಾನ್ಯ ಶಾಸಕರು ಹೇಳಿದ್ದಾರೆ. ಅಲ್ಲಿಗೆ ಒಬ್ಬರನ್ನು ನೇಮಕ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ

ರಾಜ್ಯದಲ್ಲಿರುವ ಕಿರಿಯ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವುದು

೧೪೬೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಶಿಕ್ಷಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ.—

ಅ) ರಾಜ್ಯದ ಅನೇಕ ಸರಕಾರಿ ಕಿರಿಯ ಕಾಲೇಜುಗಳಲ್ಲಿ ಪ್ರಾಂಶುಪಾಲರ ಸ್ಥಾನ ಖಾಲಿಯಿದ್ದು ಬಡ್ತಿ ಮೂಲಕ ಇದನ್ನು ಶೀಘ್ರ ತುಂಬಲಾಗುವುದೆಂದು ತಿಳಿದುಬಂದಿದ್ದರೂ ಅನೇಕ ತಿಂಗಳುಗಳಿಂದ ಈ ಬಗ್ಗೆ ಕ್ರಮ ಕೈಕೊಳ್ಳದಿರಲು ಕಾರಣವೇನು,

ಆ) ಯಾವಾಗ ಬಡ್ತಿ ನೀಡಿ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲಾಗುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಸರಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ಮುಂಬಡ್ತಿಯ, ಮುಖಾಂತರ ತುಂಬುವ ಬಗ್ಗೆ ಈಗಾಗಲೇ ಕ್ರಮ ಕೈಗೊಂಡು, ಮುಂಬಡ್ತಿ ತೈನಾತಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಆ) ಪ್ರಶ್ನೆ (ಅ) ಕ್ಕೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ಎಲ್ಲಿ ಸ್ಥಾನಗಳು ಭರ್ತಿಯಾದರೆ ಪೂರಕ ಪ್ರಶ್ನೆಗಳು ಉದ್ಭವವಾಗುವುದಿಲ್ಲ.

ಅಧ್ಯಕ್ಷರು.—ಪ್ರಶ್ನೆ ೫೬೬. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೧೬೩೨ (ಮಾನ್ಯ ಸದಸ್ಯರು ಹಾಜರಿಲ್ಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೀದರ್ ಜಿಲ್ಲೆಯಲ್ಲಿರುವ ಶಾಲಾ ಕಟ್ಟಡಗಳ ನಿರ್ಮಾಣ

೧೯೬೬. ಶ್ರೀ ಬಸವರಾಜ್ ಪಾಟೀಲ್ (ಹುಮನಬಾದ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕಾರ್ಯಕ್ಕಾಗಿ ಎಷ್ಟು ಹಣ ವಿನಿಯೋಗಿಸಲಾಗಿದೆ.

ಇ) ಯಾವ ಯಾವ ಸ್ಥಳಗಳಲ್ಲಿ ಶಾಲಾ ಕಟ್ಟಡವನ್ನು ನಿರ್ಮಿಸಲಾಗುವುದು,

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಹಣ ಒದಗಿಸಿರುವುದಿಲ್ಲ.

ಇ) ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಶಾಲಾ ಕಟ್ಟಡಗಳು ಇಲ್ಲದ ಸ್ಥಳಗಳಲ್ಲಿ ಹಾಗೂ ಅವಶ್ಯಕತೆ ಇರುವ ಶಾಲೆಗಳಿಗೆ ಹಂತ ಹಂತವಾಗಿ ಶಾಲಾ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಎನ್ ಆರ್ ಇ ಪಿ, ಆರ್ ಎಲ್ ಇ ಜಿ ಪಿ ಮುಂತಾದ ಕಾರ್ಯಕ್ರಮಗಳ ಪೂರ್ಣ ಉಪಯೋಗ ಪಡೆದು ಕಟ್ಟಡ ನಿರ್ಮಿಸಲಾಗುವುದು.